ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಗೋಪಾಲಕೃಷ್ಣ ಬೇಳೂರುರವರು ಸಾಗರ ತಾಲ್ಲೂಕಿನ ಆನಂದಪುರ ಹೋಬಳಿಯಲ್ಲಿರುವ ಕಲ್ಲೊಡ್ಡಿ ಗ್ರಾಮದಲ್ಲಿ, ಕಲ್ಲೊಡ್ಡಿ ಜಲಾಶಯ ನಿರ್ಮಿಸುವುದರಿಂದ ಈ ಭಾಗದಲ್ಲಿ 10–15 ಗ್ರಾಮಗಳು ಜಲಾವೃತವಾಗಿ ಸುಮಾರು 5000ಕ್ಕೂ ಹೆಚ್ಚು ಎಕರೆಗಳಷ್ಟು ಫಲವತ್ತಾದ ಭೂಮಿ ಮುಳುಗಡೆಯಾಗುತ್ತದೆಂದು ಹೇಳುತ್ತಿದ್ದಾರೆ. ಇದನ್ನು ಅವರೇನು ಪ್ರಸ್ತಾಪ ಮಾಡಿದ್ದಾರೆ, ಇದನ್ನು ಖಂಡಿತ ನಾನು ಮತ್ತೆ ಸರ್ವೆ ಮಾಡಿಸುತ್ತೇನೆ. ಇಡೀ ಸಾಗರವೇ ಮುಳುಗಿ ಹೋಗುತ್ತದೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ರೀತಿ ಅನ್ಯಾಯವಾಗುವುದಾದರೆ, ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು :– ಮಾನ್ಯ ಅಧ್ಯಕ್ಷರೆ,....

(ಗೊಂದಲ)

ಅಧ್ಯಕ್ಷರು :– ಹಲವಾರು ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಕೊಟ್ಟಿದ್ದೀರಿ. ಅಲ್ಲದೆ Calling Attentions ಸಹ ಕೊಟ್ಟಿದ್ದೀರಿ. ಎಲ್ಲದಕ್ಕೂ ನಾಳೆ ಅವಕಾಶ ಕೊಡುತ್ತೇನೆ. ದಯಮಾಡಿ, ಇವತ್ತು ಬಿಲ್‌ಗಳು ಪಾಸ್ ಆಗಲಿ. ಅವು ಇನ್ನೂ ಆ ಮನೆಗೂ ಹೋಗಬೇಕಾಗಿದೆ. ದಯಮಾಡಿ ಎಲ್ಲರೂ ಸಹಕರಿಸಿ.

(ಗೊಂದಲ)

ಇ) ವಿಷಯ : ನಿಪ್ಪಾಣಿ ತಾಲ್ಲೂಕಿನಲ್ಲಿರುವ ತಂಬಾಕು ಬೆಳೆಗಾರರ ಭವಣೆಯ ಬಗ್ಗೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಿಪ್ಪಾಣಿಯಲ್ಲಿರುವ ತಂಬಾಕು ಬೆಳೆಗಾರರಿಗೆ ಬಹಳ ಅನ್ಯಾಯವಾಗಿದೆ. 8 ಲಕ್ಷ ಜನರು ಇವತ್ತು ನಿರುದ್ಯೋಗಿಗಳಾಗಿದ್ದಾರೆ. ತಂಬಾಕು ಮಾಡಿ ಪಶ್ಚಿಮ ಬಂಗಾಳ, ಬೇರಳ ಎಲ್ಲಾ ಕಡೆಗೆ ಕಳುಹಿಸುವುದೇ ಅಲ್ಲಿನ main ಉದ್ಯೋಗವಾಗಿದೆ. ಸರ್ಕಾರ ದಲ್ಲಿ ತಂಬಾಕನ್ನು VAT ಪಟ್ಟಿಯಲ್ಲಿ ಸೇರಿಸಿದೆ. ಮಹಾರಾಷ್ಟ್ರದಲ್ಲಿ ಅದಕ್ಕೆ Exemption ಕೊಟ್ಟಿದ್ದಾರೆ. ನಿಪ್ಪಾಣಿಯಲ್ಲಿ ನಮ್ಮ ಎಂ.ಎಲ್.ಎ.ರವರಾದ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್‌ರವರ ನೇತೃತ್ವದಲ್ಲಿ ದೊಡ್ಡ ಪ್ರತಿಭಟನೆ ನಡೆದಿದೆ.

ಅಲ್ಲಿನ ಜನರು ಆಕ್ರೋಶಭರಿತರಾಗಿದ್ದಾರೆ. ಅವರ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕು. ಇದರಿಂದ ಅಲ್ಲಿ 8 ಲಕ್ಷ ಜನರಿಗೆ ಉದ್ಯೋಗ ದೊರೆತಿದೆ. ವಿಶೇಷವಾಗಿ ಮಹಿಳೆಯರು ಮನೆಯಲ್ಲಿ ಕುಳಿತು ಬೀಡಿ ಕಟ್ಟತಕ್ಕಂಥ ಕೆಲಸದಲ್ಲಿ ನಿರತರಾಗಿದ್ದಾರೆ. ಬೇರೆ ರಾಜ್ಯಗಳಲ್ಲಿ ಇದಕ್ಕೆ VAT ನಿಂದು exemption ಕೊಟ್ಟಿದ್ದಾರೆ. ಇವತ್ತು ಅದಕ್ಕೇ ನಾವು ಹೇಳುವುದು, ಏಕೆಂದರೆ ಉಪ ಮುಖ್ಯಮಂತ್ರಿಗಳಿಲ್ಲ, ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. He has every right. ಇವತ್ತು ಅವರು ಹೇಳಬೇಕು. VAT ನಿಂದ ತೆಗೆದು ಹಾಕಿದರೆ ತಂಬಾಕು ಬೆಳೆಗಾರರಿಗೆ ಮತ್ತು ನಿರುದ್ಯೋಗಿ ಜನರಿಗೆ ಅದರಿಂದ ಅನುಕೂಲವಾಗುತ್ತದೆ. ವಿಶೇಷವಾಗಿ ಇವತ್ತು ಅಲ್ಲಿ ಮಹಿಳೆಯವರು ಬೀದಿಯಲ್ಲಿ ನಿಂತಿದ್ದಾರೆ. ಅಲ್ಲಿ ಸಾಕಷ್ಟು ಪ್ರತಿಭಟನೆ ಆಗಿದೆ. ಮೊನ್ನೆ ಹತ್ತು ಸಾವಿರ ಜನರ ಒಂದು ದೊಡ್ಡ ಸಮಾವೇಶವಾಗಿದೆ. ಬೇಕಾದರೆ ಅದರ ಬಗ್ಗೆ ತಾವು Police Report ಅನ್ನು ತರಿಸಿಕೊಳ್ಳಿ. ಅದಕ್ಕೆ ಸರ್ಕಾರ ಅವರಿಗೆ ಬೆಂಬಲವಾಗಿ ನಿಂತು, ಅದರ ಬಗ್ಗೆ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :- ಈಗ....

(ಗೊಂದಲ)

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ಈ VAT ಬಗ್ಗೆ ಮಾನ್ಯ ಕಾಕಾ ಸಾಹೇಬ್‌ರವರಿಗೂ ಮಾತನಾಡಲು ಅವಕಾಶ ಕೊಡಿ. ತಂಬಾಕು ಬೆಳೆಗಾರರಿಗೆ.....

(ಗೊಂದಲ)

ಅಧ್ಯಕ್ಷರು :- ಮಾನ್ಯ ಹುಕ್ಕೇರಿಯವರೆ, ದಯಮಾಡಿ ಕುಳಿತುಕೊಳ್ಳಿ. ನಾಳೆ ಸನ್ಮಾನ್ಯ ಸದಸ್ಯರುಗಳು ಏನೆಲ್ಲಾ ಪ್ರಸ್ತಾಪ ಮಾಡಬೇಕೆಂದಿದ್ದೀರೋ, ಅದನ್ನು ಪ್ರಸ್ತಾಪಿಸಲು ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ ಮೇಲೂ, ನೀವು ಈ ರೀತಿಯಾಗಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ.

(ಗೊಂದಲ)

ಅಧ್ಯಕ್ಷರು :– ಅದಕ್ಕೆ ನಾಳೆ ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ :– ಮಾನ್ಯ ಧರ್ಮಸಿಂಗ್‌ರವರು ಏನು ಪ್ರಸ್ತಾಪ ಮಾಡಿದ್ದಾರೋ, ಆ ವಿಚಾರ ನಮ್ಮ ನಿಷ್ಪಾಣಿ ಭಾಗದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. 12.5% VAT ಅನ್ನು ಸರ್ಕಾರದವರೇನು....

(ಗೊಂದಲ)

ಅಧ್ಯಕ್ಷರು :– ನಾಳೆ ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ :– ಸಾರ್, ಒಂದೇ ನಿಮಿಷ.

(ಗೊಂದಲ)

ಅಧ್ಯಕ್ಷರು :– ಈಗ ಶಾಸನ ರಚನೆ. ಮಾನ್ಯ ಸಚಿವರು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿಧೇಯಕ, 2007 ನ್ನು ಮಂಡಿಸಬೇಕು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ನಾಳೆ ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

5. <u>ಶಾಸನ ರಚನೆ</u>

<u>ವಿಧೇಯಕವನ್ನು ಮಂಡಿಸುವುದು</u>

<u>ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿಧೇಯಕ, 2007</u>

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.